Aayushi International Interdisciplinary Research Journal (AIIRJ)

| VOL- XII | ISSUE- VIII | AUGUST | 2025 | PEER REVIEW e-JOURNAL | IMPACT FACTOR 8.379 | ISSN 2349-638x |
|---|---|---|---|---|---|---|

# ಹೈದರಾಬಾದ್ ಕರ್ನಾಟಕ: ರಾಯಚೂರು ಜಿಲ್ಲೆಯ ದಲಿತ ತತ್ವಪದಕಾರರು

## Hyderabad Karnataka: Raichur Jilleya Dalita Tatvapadakararu

ಡಾ.ಮಲ್ಲಯ್ಯ ( Dr. Mallayya )

ಸಹ ಪ್ರಾಧ್ಯಾಪಕರು,

ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೇವದುರ್ಗ

೧೨ ನೇ ಶತಮಾನದಲ್ಲಿ ಶರಣ ಸಂಸ್ಕೃತಿಯು ಉತ್ತುಂಗ ತಲುಪಿ, ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಭಕ್ತಿ ಸಾಹಿತ್ಯಕ್ಕೆ ಒತ್ತು ನೀಡಿದ ಈ ಹೈದರಾಬಾದ್ ಕರ್ನಾಟಕ ಬಸವಣ್ಣನವರ ನಾಯಕತ್ವದಲ್ಲಿ ವೈಚಾರಿಕ ಕ್ರಾಂತಿಯ ಕೇಂದ್ರವಾಗಿತ್ತು. ಭಾರತದ ಉತ್ತರ ಭಾಗದಲ್ಲಿದ್ದ ಈ ಪ್ರದೇಶ ಬ್ರಿಟಿಷ್ ಭಾರತದ ಮದ್ರಾಸ್ ಪ್ರೆಸಿಡೆನ್ಸಿಯಿಂದ ಆಳಲ್ಪಟ್ಟು ಹೈದರಾಬಾದ್ ರಾಜ್ಯದ ಭಾಗವಾಗಿತ್ತು. ಭಾರತ ಸ್ವಾತಂತ್ರ್ಯಯಗೊAಡರೂ, ೧೯೪೮ರ ವರೆಗೆ ಈ ಪ್ರಾಂತದ ಆರು ಜಿಲ್ಲೆಗಳಾದ, ಬೀದರ್, ಕಲ್ಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ನಿಜಾಮ್‌ನ ಆಡಳಿತಕ್ಕೆ ಒಳಪಟ್ಟಿದ್ದವು. ಈತನ ಸಾರ್ವಭೌಮತ್ವ ಸಂರಕ್ಷಿಸುವ ಜವಾಬ್ದಾರಿ ರಜಕಾರರು ಹೊತ್ತರು. ಕನ್ನಡ ಭಾಷೆ ಮಾತನಾಡುವ ಇಲ್ಲಿನ ಜನರು ಹಿಂಸೆ, ಕೊಲೆ, ಸುಲಿಗೆ, ದೌರ್ಜನ್ಯ ಮತ್ತು ಹತ್ಯಚಾರಕ್ಕೆ ಸಿಲುಕಿದರು. ಇದನ್ನು ಕಂಡ ಭಾರತದದ ಒಕ್ಕೂಟ ಸರ್ಕಾರದ ಮಂತ್ರಿಗಳಾದ ಸರ್ದಾರ್ ವಲ್ಲಭಭಾಯಿ ಪಾಟೀಲ್ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸೇರಿ "ಆಪರೇಷನ್ ಪೊಲೊ" ಹೆಸರಿನಲ್ಲಿ ಸೈನಿಕ ಪೋಲೀಸ್ ಕಾರ್ಯಾಚರಣೆ ನಡೆಸಿ, ಹೈದರಾಬಾದ್ ನಿಜಾಮ್‌ನ ಹುಟ್ಟುಡಗಿಸಿತ್ತು. ಇವರಿಬ್ಬರ ಗಟ್ಟಿತನದಿಂದ ಹೈದರಾಬಾದ್ ಕರ್ನಾಟಕ ೧೯೪೮ ಸೆಪ್ಟಂಬರ್ ೧೭ರಂದು ವಿಮೋಚನೆಗೊಂಡಿತು.

ಐದು ದಶಕದ ಸವಿನೆನಪಿಗಾಗಿ ೧೯೯೮ರಿಂದ ಇಲ್ಲಿಯವರೆಗೆ ವಿಮೋಚನೆ ದಿನಾಚಾರಣೆ ಆಚರಿಸಿಕೊಂಡು ಬಂದಿದ್ದೇವೆ. ಹೈದರಾಬಾದ್ ಕರ್ನಾಟಕ ಶರಣರ ಪರಂಪರೆಗೆ ಅನ್ವರ್ಥಕವಾಗಿ ೨೦೨೦ರಲ್ಲಿ "ಕಲ್ಯಾಣ ಕರ್ನಾಟಕ" ಎಂದು ನಾಮಕರಣಗೊಂಡಿತು. ಜಾತಿ, ಮತ, ಧರ್ಮ, ವರ್ಗ ವರ್ಣಗಳ ಹಂಗುವಿಲ್ಲದೆ, ಖ್ವಾಜಾ ಬಂದೇ ನವಾಜ್, ಅರಳಗುಂಡಿಯ ಕಲ್ಬುರ್ಗಿ ಶರಣಬಸಪ್ಪನವರ ಕಾಯಕ-ದಾಸೋಹದ ಭಾವೈಕ್ಯತೆಯ ನಾಡಾಗಿತ್ತು. ವೈಚಾರಿಕ ಕ್ರಾಂತಿಗೆ ನಾಂದಿ ಹಾಡಿದ ಶಿವಶರಣ-ಶರಣೆಯರ ಭಕ್ತಿ ಸಾಹಿತ್ಯ, ದಾಸರ ವೈರಾಗ್ಯದ ರಾಗ-ತಾಳ, ಕವಿರಾಜ ಮಾರ್ಗಕಾರನ ಜನಪದ ನುಡಿ, ಗುರು ಪರಂಪರೆಯ ತತ್ವಪದಗಳು ಅನುಭವ ಮತ್ತು ಅನುಭಾವದ ಸಾಹಿತ್ಯದ ಕೃಷಿಯಲ್ಲಿ ಬೆಳೆದ ಬೆಳೆಗಳು, ಕೃಷ್ಣ ಮತ್ತು ತುಂಗಭದ್ರೆಯ ನಡುಗಡ್ಡೆ ಜಿಲ್ಲೆ ರಾಯಚೂರು ಅನ್ನ, ಅಕ್ಷರ, ಆರೋಗ್ಯ ಮತ್ತು ಆಶ್ರಯಗಳಿಂದ ಯಾತನೆ ಅನುಭವಿಸುವ ನಾಡಿನಲ್ಲಿ ಹುಟ್ಟಿಕೊಂಡವರು, ಶರಣ ದಂಪತಿಗಳು, ಆಯ್ದಕ್ಕಿ ಲಕ್ಕಮ್ಮ, ಮಾರಯ್ಯ, ಚಿಕಲಪರ್ವಿ ವಿಜಯದಾಸ, ಬ್ಯಾಗವಾಡಿಯ ಜಗನ್ನಾಥದಾಸ, ದಾಸ ಶ್ರೇಷ್ಠರು, ಹುಬ್ಬಳ್ಳಿ ಸಿದ್ಧರೂಡರು ಗುರುಸೇವೆಗೈದ ತಪೋ ಭೂಮಿ ದೇವರ ಭೂಪ, ಉಪವಾಸಗೈದ ವೀರಾಗ್ರಣಿ ಶರಣಮ್ಮನ ಸಜ್ಜಲಗುಡ್ಡ, ಪವಾಡದ ಲೀಲೆಗೈದ ಮೌನಪ್ಪಯ್ಯನ ತಿಂಥಣಿ ಮುಂತಾದವರು ಅಕ್ಷರ-ಅನ್ನಕ್ಕಾಗಿ ದುಡಿದ ಮಹಾನೀಯರ ನಾಡಾಗಿದೆ.

ಕನ್ನಡ ಸಾಹಿತ್ಯಕ್ಕೆ ಸೃಜನಶೀಲ ಮತ್ತು ಕಲ್ಪನಾಶೀಲ ಆಯಾಮಗಳಿಂದ ಈ ಲೋಕ ಮತ್ತು ಆ ಲೋಕಗಳ ಅನುಭವ ಹಾಗೂ ದೈವ ಪರವಾದ ನಂಬಿಕೆಗಳನ್ನು ಒಳಗೊಂಡ ಆದ್ಯಾತ್ಮಿಕ ಸಂಗತಿಗಳನ್ನು ಜೀವ ದ್ರವ್ಯವಾಗಿಸಿಕೊಂಡ ಮೌಲಿಕತೆಯನ್ನು ಪಡೆದುಕೊಂಡ ನೆಲ, ಈ ಅಭಿವ್ಯಕ್ತಿ ಕ್ರಮದಲ್ಲಿ ಜನಪದ ಕವಿಗಳ ಭಕ್ತಿ, ವೈರಾಗ್ಯ, ಸಹೃದಯರ ಮನದಲ್ಲಿ ನೆಟ್ಟು ನಿಲ್ಲುವಂತೆ ಸಂಗೀತ ಮತ್ತು ಭಾಷೆ ಸಮ್ಮಿಲನಗಳ ತತ್ವಪದಗಳು ಉತ್ತರ ಕರ್ನಾಟಕದ ಜಿಲ್ಲೆಗಳ ತವರುಮನೆಯಾಗಿವೆ. ತತ್ವಪದ ಸಾಹಿತ್ಯವನ್ನು ಅನುಭಾವ ಸಾಹಿತ್ಯ, ಕೈವಲ್ಯ ಸಾಹಿತ್ಯ, ಎಂದೆಲ್ಲಾ ಗುರುತಿಸಲಾಗಿದೆ. ಬದುಕಿನ ಹಲವು ಮುಖಗಳ ಆಳದಲ್ಲಿ

ಹುದುಗಿರುವ ದೇವರನ್ನು, ಜಗತ್ತನ್ನು ಕುರಿತು ಅಪೂರ್ವ ಸಂವೇದನೆಗಳ. ಆಧ್ಯಾತ್ಮದ ಗಾಂಭೀರ್ಯವನ್ನು ಸಾಕ್ಷಾತ್ಕರಿಸಿಕೊಂಡು ಮೈದಳೆದಿವೆ. ತತ್ವಪದಕಾರರು ದಿನನಿತ್ಯದ ಬಾಳು ಬದುಕಿನ ಮತ್ತು ದೈವಿಪರವಾದ ಸಂವೇದನೆಗಳು ಹಾಡುಗಳಾಗಿ ನಿವೇದಿಸಿಕೊಂಡಿದ್ದಾರೆ. ಕಡಕೋಳ, ಮಡಿವಾಳಪ್ಪ, ಕಡೂರು ಬಸವಲಿಂಗ ಶರಣರು, ಇವರಂತೆ ರಾಯಚೂರು ಜಿಲ್ಲೆಯಲ್ಲಿ ಗುರುತಿಸಲಾಗಿದೆ. ಅಲ್ಲದೇ ಪ್ರಮುಖ ೨೩ ಅನುಭಾವಿ ತತ್ವಪದಕಾರರಲ್ಲಿ ೪ ಜನ ದಲಿತ ತತ್ವಪದಕಾರರು ಗಮನಾರ್ಹರಾಗಿದ್ದಾರೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹುಟ್ಟಿಕೊಂಡ ತತ್ವಪದ ಸಾಹಿತ್ಯಕ್ಕೆ ತನ್ನದೇ ಆದ ಒಂದು ಪರಂಪರೆಯಿದೆ. ಈ ಸಾಹಿತ್ಯ ಅಧಿಕೃತವಾಗಿ, ವಿಶೇಷ ಪ್ರಕಾರವಾಗಿ ಕಾಣಿಸಿಕೊಂಡಿದ್ದು, ೧೮-೧೯ನೇ ಶತಮಾನದಲ್ಲಿ ತತ್ವಪದಕಾರರು ರಚಿಸಿದ ರಚನೆಗಳಿಗೆ ತತ್ವಪದ ಸಾಹಿತ್ಯ ಎಂದಿದ್ದಾರೆ. 'ತತ್ವ' ಎಂದರೆ ಸಿದ್ಧಾಂತ. ಪರಮಾತ್ಮ, ನಿಜ ಸ್ಥಿತಿ ಎಂದರ್ಥವಾಗುತ್ತದೆ. ಇದನ್ನು ತತ್ವಜ್ಞಾನ ಮತ್ತು ಬ್ರಹ್ಮಜ್ಞಾನವೆಂದು ಕರೆಯಲಾಗಿದೆ. 'ಪದ' ಎಂಬುದು ಹಾಡು, ಹದಗೊಂಡ ಶಬ್ದ ಎಂದು ಕರೆಯಲಾಗಿದೆ. 'ತತ್ವ' ವಸ್ತುವಾದರೆ 'ಪದ' ಅಭಿವ್ಯಕ್ತಿ ಮಾಧ್ಯಮ. ವಸ್ತು ಮತ್ತು ಅಭಿವ್ಯಕ್ತಿ ಇವೆರಡರ ಸಮನ್ವಯಗೊಂಡಿರುವುದೇ 'ತತ್ವಪದ' ಇದು ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಸಾಹಿತ್ಯದ ಪ್ರಕಾರವಾಗಿರುವುದರ ಜೊತೆಗೆ ಸಂಸ್ಕೃತಿಯೊAದರ ಪ್ರತೀಕವೂ ಆಗಿದೆ. ತತ್ವಪದಗಳು ಲೌಕಿಕ ಮತ್ತು ಅಲೌಕಿಕ ಬದುಕನ್ನು ಅರ್ಥೈಸುವ ಭಜನೆ ಪದಗಳೆಂದು ಕರೆದಿದ್ದಾರೆ. ಭಕ್ತಿ, ಜ್ಞಾನ, ವೈರಾಗ್ಯ ನೆಲೆಯಲ್ಲಿ ಗುರುಭಕ್ತಿ, ಸದಾಚಾರ, ನೈತಿಕತೆ, ಜಾತ್ಯಾತೀತ, ಭಾವೈಕ್ಯತೆ, ವಸಾಹತುಶಾಹಿಯಂತಹ ವಿಚಾರಗಳು ವಸ್ತುನಿಷ್ಟವಾಗಿ ತತ್ವಪದಕಾರರು ವಿವೇಚಿಸಿದ್ದಾರೆ.

ತತ್ವಪದಕಾರರದ್ದು, ಧರ್ಮ, ಜಾತಿ, ಭಾಷೆಯ ಗಡಿಗಳ ಎಲ್ಲೆಯನ್ನು ಮೀರಿದ ವಿಶ್ವಮಾನವ ಪ್ರಜ್ಞೆ. ಇವರಲ್ಲಿ ಲಿಂಗ ಅಸಮಾನತೆಗೆ ಸ್ಥಳವಿಲ್ಲ. ಹೆಣ್ಣು ಮೋಕ್ಷದ ಸಾಧನೆಯಲ್ಲಿ ಸಮಾನ ಅರ್ಹಳೆಂದು ಭಾವಿಸುತ್ತದೆ. ತತ್ವಪದಕಾರರಿಗೆ ಸಂಸಾರ ನಿಷಿದ್ಧವಲ್ಲ. ಅವರು ಎಲ್ಲರಂತೆ ಕುಟುಂಬಿಗಳು. ಸಂಸಾರದೊಳಗಿದ್ದೇ ಪರಮಾರ್ಥವನ್ನು ಕಾಣಬಹುದೆಂದು ನಂಬುತ್ತಾರೆ. ಗುರುವಿನಿಂದ ದೀಕ್ಷಾಬದ್ಧರಾದ ತತ್ವಪದ ಸಾಧಕರು ನಿರಂತರ ಸಾಧನೆಯ ಹಾದಿಯಲ್ಲಿರುತ್ತಾರೆ. ನಿಗದಿತ ಸಮಯದಲ್ಲಿ ಬೆಟ್ಟದ ಗವಿ, ಪಾಲುಗುಡಿ, ಊರಿನ ದೇವಸ್ಥಾನಗಳಲ್ಲಿ ಒಟ್ಟಿಗೆ ಸೇರಿ ತತ್ವ ಚಿಂತನೆ ನಡೆಸುತ್ತಾರೆ. ವರ್ಷಕ್ಕೊಮ್ಮೆ ಅಥವಾ ನಿರ್ದಿಷ್ಟ ಸಮಯದಲ್ಲಿ ಗುರು-ಶಿಷ್ಯರೆಲ್ಲರೂ ಸೇರಿ ಗುರು ಕಾರ್ಯವನ್ನು ನಡೆಸುತ್ತಾರೆ. ಬಹುಪಾಲು ತತ್ವಪದಕಾರರ ರಚನೆಯಲ್ಲಿ ಗುರುವಿನ ಅಂಕಿತವನ್ನು, ತನ್ನ ನೆಲದ ನಂಬಿಕೆಯ ದೈವ ಅಂಕಿತವನ್ನು ಕೊನೆಯಲ್ಲಿ ಇಟ್ಟುಕೊಂಡಿರುತ್ತಾರೆ. ಸಾಮಾನ್ಯವಾಗಿ ತತ್ವಪದಗಳ ಸಾಲುಗಳು ನಾಲ್ಕು ಇದ್ದು, ಒಮ್ಮೊಮ್ಮೆ ಮೂರು, ಆರು, ಅಪರೂಪಕ್ಕೆ ಎರಡು ಸಾಲುಗಳ ಒಳಗೊಂಡ ನುಡಿಗಳು ದೊರೆಯುತ್ತವೆ. ರಾಗ-ತಾಳ ನಿರ್ದೇಶನವಿದ್ದು ಅಥವಾ ಇಲ್ಲದೆ ತತ್ವಪದಗಳು ಉದಾಹರಣೆಯಾಗಿ ಸಿಗುತ್ತವೆ. ಹಾರ್ಮೋನಿಯಂ, ತಬಲ ಮತ್ತು ಅನೇಕ ರೀತಿಯ ತಾಳವಾದ್ಯಗಳು ಬಳಕೆಯಾಗುತ್ತವೆ.

ನಡೆ-ನುಡಿ ಸಿದ್ಧಾಂತದ ಗುರು ಪರಂಪರೆಗೆ ಸಾಧನೆಯ ಹಾದಿಯಾದ ಪ್ರಮುಖ ನಾಲ್ಕು ಜನ ದಲಿತ ತತ್ವಪದಕಾರೆಂದರೆ ತಿಪ್ಪಣ್ಣ ತಾತಾ, ಯರಮಾರೆಪ್ಪ, ಹೊಸೂರು ತಿಪ್ಪಣ್ಣ ಮತ್ತು ಕಲ್ಮಲಾ ತಾಯಣ್ಣ.

**೧. ತಿಪ್ಪಣ್ಣ ತಾತಾ:**

ತಿಪ್ಪಣ್ಣ ತಾತನವರು ರಾಯಚೂರು ತಾಲೂಕಿನ ಮಲಿಯಾಬಾದ್ ಗ್ರಾಮದಲ್ಲಿ ೧೯೪೦ರಲ್ಲಿ ಜನಿಸಿದರು. ತಂದೆ ಫಕ್ಕೀರಪ್ಪ ತಾಯಿ ಲಕ್ಷ್ಮಮ್ಮ. ಈತನಿಗೆ ಇಬ್ಬರು ಹೆಂಡತಿಯರು. ಮೊದಲ ಹೆಂಡತಿಯು ತೀರಿಕೊಂಡ ನಂತರ ೨ನೇ ಹೆಂಡತಿ ಶರಣಮ್ಮನೊಂದಿಗೆ ವಿವಾಹವಾದರು. ಇವರಿಗೆ ೪ ಜನ ಗಂಡು ೧ ಹೆಣ್ಣು ಒಟ್ಟು ೫ ಜನ ಮಕ್ಕಳಿದ್ದರು.

ಇವರು ಮಾದಿಗ ಜನಾಂಗದಲ್ಲಿ ಹುಟ್ಟಿದರು. ತಿಪ್ಪಣ್ಣನವರು ಗುರು ಹನುಮೇಶನಿಂದ ದೀಕ್ಷೆ ಪಡೆದ ನಂತರ ತಿಪ್ಪಣ್ಣ ತಾತಾರಾದರು. ಈತ ರಾಯಚೂರು ನಗರದ ಮಂಗಳವಾರ ಪೇಟೆ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಒಂದು ಕಡೆ ಶಾಲಾ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ಗುರುವಾದರೆ, ಇನ್ನೊಂದು ಕಡೆ ಭಕ್ತ ಜನರಿಗೆ ಆತ್ಮೋನ್ನತಿಯ ಮಾರ್ಗ ತೋರಿಸುವ ಗುರುವಾಗಿದ್ದ. ರಾಯಚೂರು ನಗರದ ಜಹಿರಾಬಾದ್ "ಪ್ರ.ಶ್ರೀ.ಸದ್ಗುರು ಶರಣಬಸವೇಶ್ವರರ ಶೂನ್ಯ ಸಿಂಹಾಸನದ ಪ್ರಕಾಶನ

ಪ್ರಭುಲೀಲೆಯ ಅನುಭವ ಮಂಟಪ" ಇದೆ. ಈ ಮಂಟಪಕ್ಕೆ ಸಂಬAಧಿಸಿದ ಧಾರ್ಮಿಕ ಕಾರ್ಯಗಳೆಲ್ಲವೂ ತಿಪ್ಪಣ್ಣ ತಾತಾನ ನೇತೃತ್ವದಲ್ಲಿ ನಡೆಯುತ್ತವೆ. ೧೨ನೇ ಶತಮಾನದ ವಚನಕಾರ ಅಲ್ಲಮನ ತಾತ್ವಿಕ ನೆಲೆಯಲ್ಲಿ ಚಿಂತಿಸುವ ತಿಪ್ಪಣ್ಣ ತಾತಾ ಅನೇಕ ಹಾಡುಗಳು ರಚಿಸಿದ್ದಾರೆ. ಈ ಹಾಡುಗಳು ರಾಯಚೂರಿನ ಭಜನ ಮಂಡಳಿಗಳಲ್ಲಿ ಇಂದಿಗೂ ಹಾಡುತ್ತಾರೆ. ಈತನ ತತ್ವಪದಗಳ ಅಂಕಿತನಾಮ 'ಶ್ರೀಗುರು ಹನುಮೇಶ' ಎಂಬುದಾಗಿದೆ.

ಎಲ್ಲಿ ಹಾನ ದೇವನು! ಎಲ್ಲಿ ಹಾನ |
ಈ ದೇಹದ ಗವಿಯೋಳು ಐದಾನ ||
ನರರಿಗೆ ವರನು ಆಗ್ಯಾನು
ಬಲ್ಲಂಥ ಜ್ಞಾನಿಗೆ ಶಿವನಾಗ್ಯಾನ |
ಆರುಮಂದಿ ಒಡಲೋಳು ಐದ್ಯಾನ |
ಒಂಭತ್ತು ಬಾಗಿಲೋಳು ನಿಂತಾನ |

ಐದು ವರ್ಣದ ಅರಿವೆ ಉಟ್ಟಾನ |
ಆರು ಆಭರಣದ ತೊಟ್ಟಾನ ||
ಹೂವಿನ ಹಾರವು ಭರಸ್ಯಾನ |
ಈ ಒಡಲೋಳು ಆತನು ಆಡತಾನ ||

ದೇಹವೆಂಬ ಆಶ್ರಮದೊಳಗೈದಾನ ||
ಗುರು ಶಿಷ್ಯರಿಗೆ ಉಪದೇಶ ಮಾಡತಾನ |
ಗುರು ತನ್ನ ಪಾದವ ಇಟ್ಟಾನ |
ಗುರು ಪಾದದ ಮರ್ಮವ ಹೇಳುತಾನ ||
ಅದಿಯೋಳು ಶಿಷ್ಯನು ಕುಂತಾನ |
ಆರು ಗುಣಗಳು ಅಳಿದು ಹೋಗುತಾನ ||

ಆರು ಮೂರು ಒಂಭತ್ತು ತಳಿತಾನ |
ಹತ್ತು ಹನ್ನೊ ಹನ್ನೊಂದರೊಳಗಾಡುತಾನ |
ಹನ್ನೊಂದಳಿದು ಆನಂದ ಸೇರುತಾನ |
ಹನ್ನೆರಡಳಿದು ಆತ್ಮನೋಳು ಕೂಡುತಾನ ||

ಬಲ್ಲಂಥ ಜ್ಞಾನಿಗೆ ಒಲಿತಾನ |
ಬಗೆಯದ ನರರಿಗೆ ಅರಿಯನು |
ಈ ದೇಹದೊಳಗೆ ಗುರುವು ಐದಾನ |
ದೇಶಕ್ಕಧಿಕ-ವಾದ ಮಲಿಯಾಬಾದು |
ಶರಣ ತಿಪ್ಪಣ್ಣಯ್ಯನು ಹೇಳ್ಯಾನು |
ಮೂರು ಲೋಕದ ಅಧಿಕ ತೋರಿಸ್ಯಾನ |
ಶ್ರೀ ಗುರು ಹನುಮೇಶನ ನೆನಿತಾನ ||

ಎಂದು ದೇವರ ಅಸ್ಥಿತ್ವವನ್ನು ಗುರುವಿನಲ್ಲಿ ಕಾಣುವ ಚಿತ್ರಣವ ಇದೆ. ಶರಣರಂತೆ ನಡೆ-ನುಡಿ ಒಂದಾಗಿರಬೇಕು, ಶುದ್ಧವಾಗಿರಬೇಕು, ಅರಿವಿನಿಂದ ಕೂಡಿರಬೇಕು. ದಾಸರಂತೆ ಸಂಸಾರ ಮಾಯೆ ಎಂದು ಹೇಳುತ್ತಾನೆ. ಅಣ್ಣ, ಅವ್ವ, ತಂಗಿ ಎಂದು ಸಂಭೋಧಿಸುವ ಪರಿಭಾಷಿಕ ಪದಗಳು ಆತ್ಮೀಯವಾಗಿದೆ. Wಪ್ಪಣ್ಣ ತಾತಾನ ತತ್ವಪದಗಳಲ್ಲಿ ಹೆಚ್ಚಾಗಿ ಗುರುವಿನ ಯೋಗ ಮಹಿಮೆ ವಿಚಾರಗಳೇ ಪ್ರಧಾನವಾಗಿವೆ.

**೨.ಯರಮಾರೆಪ್ಪ:**

ರಾಯಚೂರು ನಗರದ ಗಾಜಗಾರ ಪೇಟೆಯ ನವಾಬಗಡ್ಡೆಯಲ್ಲಿ ೧೯೨೫ರಲ್ಲಿ ಜನಿಸಿದರು. ತಂದೆ ತಿಕ್ಕಯ್ಯ, ತಾಯಿ ಸವರಮ್ಮ, ಇವರು ಮಾದರ ಜಾತಿಗೆ ಸೇರಿದವರಾಗಿದ್ದರು. ಯರಮಾರೆಪ್ಪ ೨ನೇ ತರಗತಿ ಮಾತ್ರ ಓದಿದ್ದರು. ಈತನ ತಂದೆ ತಾಯಿಗಳು ಕನ್ನಡ-ಉರ್ದು ಭಾಷೆಗಳಲ್ಲಿ ಅಕ್ಷರ ಅಭ್ಯಾಸ ಮಾಡಿಸಿದರು. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ತತ್ವಪದಗಳು ರಚಿಸಿದ್ದಾನೆ. ಈತ ರಾಯಚೂರಿನ ಪ್ರಥಮ ದಲಿತ ತತ್ವಪದಕಾರ. ಈತನ ಗುರು ಜಹಿರಾಬಾದ್ ತಿಪ್ಪಣ್ಣ ತಾತಾ. ಈತನ ಕಾಯಕ ನಿಷ್ಠೆ ೧೨ನೇ ಶತಮಾನದ ಮಾದರ ಚೆನ್ನಯ್ಯ, ಮಾದರ ಹರಳಯ್ಯನ ಮತ್ತು ಧೂಳಯ್ಯ ಈ ವಚನಕಾರರ ಕಾಯಕ ತತ್ವ ನೆನಪಿಸುತ್ತದೆ. ಈತನ ಹೆಂಡತಿ ಚಂದ್ರಮ್ಮ(ಸೋದರಮಾವನ ಮಗಳು) ಇವರಿಗೆ ಮಕ್ಕಳಿಲ್ಲದಿದ್ದರೂ ಬಂಜೆತನದ ಬಾವ ಸುಳಿಯಲಿಲ್ಲ. 'ಸತಿ-ಪತಿಗಳ ಒಂದಾದ ಭಕ್ತಿ ಹಿತವಪ್ಪುದ ಶಿವಂಗೆ' ಎಂಬ ನುಡಿಯಂತೆ ಬದುಕಿದ ದಂಪತಿಗಳು. ಈತನದ್ದು ಮೋಚಿ ಕಾಯಕ. ಯರಮಾರೆಪ್ಪನ ತತ್ವಪದಗಳಲ್ಲಿ ಪರಮಾತ್ಮನಿಗಿಂತಲೂ ಜೀವಾತ್ಮಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದಾನೆ. ಮನುಷ್ಯ ಬಾಹ್ಯ ಕ್ರಿಯಾಚಾರಣೆಗಳಿಗಿಂತಲೂ ಅಂತರAಗ ಶುದ್ಧತೆ ಕಾಪಾಡಿಕೊಂಡು ಹೋಗುವ ಕಳಕಳಿ ವ್ಯಕ್ತಪಡಿಸುತ್ತಾನೆ. ಈತನ ತತ್ವ ಪದಗಳ ಅಂಕಿತನಾಮ ಇಬ್ಬರ ಗುರುಗಳ ಹೆಸರಿನಲ್ಲಿದೆ.

ದೀಕ್ಷೆ ಕೊಟ್ಟ ಗುರು ತಿಪ್ಪಣ್ಣ ತಾತಾನಾದರೆ, ಪ್ರೇರಣೆ ಗುರು ಹನುಮಂತೇಶನಾಗುತ್ತಾನೆ.

ಹೀನಮಾನವನಾದೆನೊ ಈ ಜಗದೊಳು
ಹೀನಮಾನವನಾದೆ ಗ್ನಾನವ ತಿಳಿಯದೆ
ಸ್ವಾಮಿ ನಿಮ್ಮನು ನಾವ ಮನದೊಳು ನೆನೆಯದೆ ||

ಹತ್ತಿಯ ಹೊಲದಾಗ ಎತ್ತು ಸತ್ತಾದ ಒಂದು
ಸತ್ಯ ಕತ್ತಿಯ ಪಿಡಿದು ಚರ್ಮವ ಸುಲಿ ತಂದು
ಸುಲಿದ ಚರ್ಮಕೆ ನಾನು ಸುಣ್ಣ ಧರಿಸಿದರು

ತನವೆಂಬೊ ಭಾಂಡದೊಳು ಮನವೆಂಬೊ ನೀರು ತುಂಬಿ
ಘನವೆAಬೊ ಅಡವಿಗ್ಹೋಗಿ ಅವರೆಚಕ್ಕೆಯ ತಂದು
ಸುಣ್ಣದ ತೊಗಲನ್ನು ಬಣ್ಣ ಮಾಡಿದೆ ನಾನು ||

ಬಣ್ಣ ಮಾಡಿದ ತೊಗಲು ಬಯಲಿಗೆ ನೆನೆಯಿಟ್ಟು
ಕುಟ್ಟಿ ಕುಟ್ಟಿ ಹದಮಾಡಿ ಹೊಲಿದೆ ನಿಮ್ಮ ಮೆಟ್ಟು
ಯೋಗಿ ತಿಪ್ಪಯ್ಯಗೆ ಗೊತ್ತು ಏರಿದ ಏಳುಮೆಟ್ಟು ||

ರಾಯಚೂರ ಪುರವಾಸ ದ್ವಾರನವರಂಗಧೀಶ
ಶ್ರೀ ಗುರು ಹನುಮೇಶ ನೆನೆದರೆ ಭವನಾಶ
ಜಹಿರಾಬಾದಲಿ ನೋಡು ಕುಂತಾನ ಜಗದೀಶ ||

ಎಂದು ಕಾಯಕ ಕುರಿತು ಹೇಳುವ ವಿಚಾರ ಆಧ್ಯಾತ್ಮಿಕವಾಗಿದೆ. ಗುರುವಿನ ನಾಮ ನೆನೆಯದೆಯಿರುವ ಮನುಷ್ಯನು ಹೀನನೇ ಹೊರತು ಕೆಳಜಾತಿಯಲ್ಲಿ ಹುಟ್ಟಿದವನು ಹೀನನಲ್ಲ ಎಂಬ ಸಂಗತಿಯನ್ನು ಸ್ಪಷ್ಟಪಡಿಸುತ್ತಾನೆ. "ಎಕ್ಕಡ ಉನ್ನಾಡು ರಾ ದೇವುಡು, ಚಿಕ್ಕಾಡು ದೊರಕಾಡು ರಾ" ಎಂಬ ತತ್ವಪದದಲ್ಲಿ ದೇವರ ಅಸ್ಥಿತ್ವ ಮತ್ತು ಕರ್ಮಸಿದ್ಧಾಂತವನ್ನು ಕುರಿತು ಹೇಳಲಾಗಿದೆ.

**೩.ಹೊಸೂರು ತಿಪ್ಪಣ್ಣ:**

ಹೊಸೂರು ತಿಪ್ಪಣ್ಣನವರು ರಾಯಚೂರು ತಾಲೂಕಿನ ಹೊಸೂರು ಗ್ರಾಮದಲ್ಲಿ ೧೯೪೨ರಲ್ಲಿ ಜನಿಸಿದರು. ತಂದೆ ದುರ್ಗಪ್ಪ, ತಾಯಿ ಮಲ್ಲಮ್ಮ, ಈತನ ಹೆಂಡತಿ ಶರಣಮ್ಮ. ಸಂಸಾರಿಯಾಗಿದ್ದರೂ ಅನುಭಾವಿ ಕವಿಯಾಗಿದ್ದಾನೆ. ಇವರಿಗೆ ನಾಲ್ಕು ಜನ ಮಕ್ಕಳು. ಮಾದಿಗ ಕುಲದಲ್ಲಿ ಜನಿಸಿದ ತಿಪ್ಪಣ್ಣ ಎಚ್.ಎಸ್.ಸಿ. ಪಾಸು ಮಾಡಿ ಶಿಕ್ಷಕ ತರಬೇತಿ ಹೊಂದಿ, ರಾಯಚೂರಿನ ಹಾಸ್ಮಿಯಾ ಸರ್ಕಾರಿ ಶಾಲೆಯ ಶಿಕ್ಷಕನಾಗಿ ಸೇವೆ ಸಲ್ಲಿಸಿದರು. ಸಂಸಾರದ ಅನೇಕ ತೊಂದರೆಗಳ ನಡುವೆಯೂ ದೀಕ್ಷಾಗುರು ತಿಪ್ಪಣ್ಣ ತಾತಾನೊಂದಿಗೆ ಧಾರ್ಮಿಕ ಕಾರ್ಯಗಳಲ್ಲಿ ನಿರತನಾಗಿರುತ್ತದ್ದನು.

ಹೊಸೂರು ತಿಪ್ಪಣ್ಣನ ಒಟ್ಟು ೧೯ ತತ್ವಪದಗಳಲ್ಲಿ ೭ ಹಾಡುಗಳು ಗುರು ಮಹಿಮೆಗೆ ಸಂಬAಧಿಸಿವೆ. ಉಳಿದ ಹಾಡುಗಳು ಅನುಭಾವ ವಿಷಯಕ್ಕೆ ಸಂಬAಧಿಸಿವೆ. ಈತನ ತತ್ವಪದಗಳ ಅಂಕಿತನಾಮ 'ನವಪುರಜಾತ' ಎಂಬುದಾಗಿದೆ.

ಇವನೆಂಥ ಒಳ್ಳೇ ಮಾನವನು |
ಗುರು ಧ್ಯಾನದೊಳಗೆ ಬಿದ್ದು ಉರುಳಾಡುವನು ||

ಅಲ್ಲಮನು ಹುಬ್ಬಿ ಬಂದಾನ|
ಈ ದೇಹದೊಳಗೆ ಮನೆ ಮಾಡಿಕೊಂಡಿಹನು |
ಅಂತರಾತ್ಮದಲ್ಲಿ ಕುಂತಾನ |
ಸಣ್ಣ ತಂತಿಯAತೆ ಕಿವಿಯೊಳಗೆ ಊದುವನು ||

ಆರು ಮಂದಿನ ಕೊಂದಾನ |
ಸಂದು ತಿಳಿಸಲು ಮುಂದೆ ತಾನೆ ಬಂದಾನ ||
ಮೂವ್ವರನೊಂದು ಮಾಡ್ಯಾನ |
ಜಡಿಮ ಹಾಕಿದ ಬಾಗಿಲ ಕದನ ತೆರೆದಾನ ||

ಹತ್ತು ಹರದಾರಿ ಮೇಲಾನ |
ಮತ್ತೆ ಒಂದು ಎರಡು ಮೂರು ಏರಿ ಕುಂತಾನ ||
ಮಾನವರೆಂದರೆ ಮಹದೇವಾನು |
ಜನನ - ಮರಣಾದಿಗಳಿಗೆ ದೂರವಾದವನು ||

ಶೃಷ್ಠಿಗಧಿಕ ರಾಜೂರು ಶರಣ |
ಶ್ರೇಷ್ಠ ಸದ್ಗುರು ಹನುಮೇಶ ಅಲ್ಲಮನ ಸಮಾನ ||
ಬ್ರಹ್ಮನಿಷ್ಠ ನವ ಪುರ ಜಾತನು |
ದಿಟ್ಟ ಮನಸಿಲೆ ಹೊಡೆದನು ಅನುಭವದ ಬಾಣ ||

ಎಂದು ಆಧ್ಯಾತ್ಮಿಕ ಸಾಧನೆ ನುಡಿಯುತ್ತಾನೆ. ಮತ್ತೊಮ್ಮೆ "ಇದಾ ಎಂಥ ಗಂಡ ಸಿಕ್ಕ ನೋಡವ್ವ ಹಗಲು ರಾತ್ರಿ ಬಿಡನವ್ವ" ಎಂದು ತನ್ನ ಗಂಡನ ಪ್ರೀತಿಯ ಕುರಿತು ಬಣ್ಣಿಸಿ ಹೇಳುವಲ್ಲಿ ಅಲೌಕಿಕದ ಆನಂದ ಭಾವವಿದೆ. 'ಶರಣ ಸತಿ-ಲಿಂಗ

ಪತಿ'ಯಂತಹ ತಾತ್ವಿಕ ವಿಚಾರಗಳು ಶೃಂಗಾರ ಭಕ್ತಿಯ ಮೂಲಕ ಅಭಿವ್ಯಕ್ತಿಸುವ ರೀತಿ ಹೊಸದಾಗಿದೆ.

**೪.ಕಲ್ಮಲಾ ತಾಯಣ್ಣ:**

ಬಿಂಗಾಣಿ ಎಂಬ ಅಡ್ಡ ಹೆಸರಿನ ಕುಟುಂಬದಲ್ಲಿ ೧೯೪೩ರಲ್ಲಿ ರಾಯಚೂರು ತಾಲೂಕಿನ ಕಲ್ಮಲಾ ಗ್ರಾಮದಲ್ಲಿ ಮಾದಿಗ ಜನಾಂಗದಲ್ಲಿ ಜನಿಸಿದರು. ಮ್ಯಾಟ್ರಿಕ್ ಹಂತದವರೆಗೆ ಓದಿದ ತಾಯಣ್ಣನವರು ಕಂದಾಯ ಇಲಾಖೆಯಲ್ಲಿ ೨ನೇ ದರ್ಜೆಯ ಸಹಾಯಕರಾಗಿ ಸೇವೆ ಸಲ್ಲಿಸಿದ್ದರು. ತಂದೆ-ತಾಯಿ ಹೆಸರು ಲಭ್ಯವಿಲ್ಲ. ಹೆಂಡತಿ ಮತ್ತು ಮಕ್ಕಳೊಂದಿಗೆ ಸಂಸಾರದಲ್ಲಿದ್ದ ಈತನು ತಿಪ್ಪಣ್ಣ ತಾತನ ಶಿಷ್ಯನಾಗಿದ್ದರು.

ತಾಯಣ್ಣ ಅನೇಕ ತತ್ವಪದಗಳು ರಚಿಸಿರಬಹುದು. ಆದರೆ ದೊರೆತಿರುವುದು ೩ ಮಾತ್ರ. ಈತನ ತತ್ವಪದಗಳ ಅಂಕಿತ 'ಕಲ್ಮಲಾ ತಾಯಣ್ಣ' ಮತ್ತು 'ಗುರುತಿಪ್ಪಣ್ಣ' ಎಂಬುದಾಗಿದೆ.

ನಮೋನಮಃ ಓಂ ಶ್ರೀ ಗುರು ಹನುಮೇಶ |
ಪಾರು ಮಾಡೋ ಪಾಶ | ಬೇಡುವೆ ಶಿಷ್ಯ ||

ಅಂಗದ ರಾಜನೆ | ಅಂಗರಹಿತ ದೇವನೆ |
ಮುರಳೀ ನಿನಾದನೆ | ಸರ್ವಮೂಲ ಶಿವನೆ ||
ಕಾರುಣ್ಯ ನಿಧಿಯ ನೀಡಿ | ಕಾಯೋ ದೇವನೆ ||

ಮಾಯದ ಮೂಲನೆ | ಮಾಯ ರಹಿತ ಶ್ರೇಷ್ಠನೆ |
ಭಾನು ಪ್ರಕಾಶನೆ | ನಿಸ್ಸಂಗ ದೇವನೆ |
ಪಾವನ ಜಲವ ನೀಡಿ | ತೃಷೆಯ ಕಳೆಯೊದೇವನೆ ||

ರಾಜೂರು ವಾಸನೆ | ಅಖಂಡ ಮಹಿಮನೆ |
ಸರ್ವಜೀವಿಜಾತನೆ | ಸರ್ವಲಯ ಕರ್ತನೆ |
ಕಲ್ಮಾಲಿ ತಾಯಣ್ಣನ | ಪೊರೆಯೊ ದೇವನೆ ||

ಈತನಿಗೆ ದೇವಾಲಯದ ಗರ್ಭಗುಡಿಯಲ್ಲಿರುವ ಶಿವನಿಗಿಂತಲೂ, ತನ್ನ ಅಂತರAಗದಲ್ಲಿರುವ ಶಿವಸ್ವರೂಪಿ ಗುರು ತಿಪ್ಪಣ್ಣ ಮುಖ್ಯನಾಗುತ್ತಾನೆ. ಈ ವಿಚಾರಭಾವದಲ್ಲಿ ಶರಣರ ಆಲೋಚನಧಾರೆ ಅಡಗಿದೆ.

**ಉಪಸಂಹಾರ:**

ಜಾತಿ, ಧರ್ಮ, ವರ್ಗ, ವರ್ಣ ವಸಾಹತುಶಾಹಿಗಳನ್ನು ಮೀರಿ ಬೆಳೆದ ತತ್ವ ಪದಕಾರರು ಲೌಕಿಕ ರೀತಿಯಲ್ಲಿ ಬದುಕಿದರೂ, ಅಲೌಕಿಕತೆಗೂ ಹೆಚ್ಚಿನ ಮಹತ್ವ ನೀಡಿದ್ದರು. ಅಕ್ಷರದ ಮಡಿವಂತಿಕೆ ಕಾಲದಲ್ಲಿ ದಲಿತ ವರ್ಗದ ಈ ತತ್ವ ಪದಕಾರರು ಅಭ್ಯಾಸ ಮಾಡಿ ಸರ್ಕಾರಿ ನೌಕರಿಯಲ್ಲಿದ್ದುಕೊಂಡು, ಸಂಸಾರದಲ್ಲಿಯೇ ಸದ್ಗತಿಯನ್ನು ಕಂಡವರು, ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರವಾಗಿದೆ.

**ಗ್ರಂಥ ಋಣ**

೧. ಡಾ.ಬಸವರಾಜ ಸಬರದ, ಗುರು-ಶಿಷ್ಯರ ತತ್ವಪದಗಳು.
೨. ಡಾ.ಅಮರೇಶ ನುಗೂಡೋಣಿ, ತತ್ವಪದ ಶಾಸ್ತ್ರ.
೩. ಗೌರಮ್ಮ ಟಿ ರಾಜು, ತತ್ವಪದಗಳ ಪಾರಂಪರಿಕತೆ ಮತ್ತು